ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\1817\2014\ಉನಿವಿ-4 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:28/11/2018

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ಅಂಬರೀಷ, ಅಧ್ಯಕ್ಷರು, ಜಿಲ್ಲಾ ಬಸವ ಸೇವಾ ಸಮಿತಿ (ರಿ), #138, ವರುಣಾ ಹೋಬಳಿ, ಸೋಮೇಶ್ವರ ಗ್ರಾಮ, ವರುಣಾ ಮೈಸೂರು ತಾಲ್ಲೂಕ್ ಮತ್ತು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*********

ಮೈಸೂರು ತಾಲ್ಲೂಕ್ ಮತ್ತು ಜಿಲ್ಲೆ ವರುಣಾ ಹೋಬಳಿ ಸೋಮೇಶ್ವರ ಗ್ರಾಮ #138 ಜಿಲ್ಲಾ ಬಸವ ಸೇವಾ ಸಮಿತಿ (ರಿ) ಅಧ್ಯಕ್ಷರು ಶ್ರೀ.ಅಂಬರೀಷ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ತಾಲ್ಲೂಕ್ ಮತ್ತು ಜಿಲ್ಲೆ 1) ಸೋಮೇಶ್ವರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ.ಕವಿತ ಮತ್ತು 2) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರಾಧಿಕಾರಿಯಾದ ಶ್ರೀ.ನಿರಂಜನ್ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಮೈಸೂರು ತಾಲ್ಲೂಕ್ ವರುಣಾ ಹೋಬಳಿ ಸೋಮೇಶ್ವರಪುರ ಗ್ರಾಮದ ಮಧ್ಯೆ ಹಾಗೂ ವಸತಿ ಪ್ರದೇಶದ ಮಧ್ಯೆ ಮೊಬೈಲ್ ಟವರನ್ನು ಅಳವಡಿಸಿದ್ದು, ಇದಕ್ಕೆ ಅಳವಡಿಸಿದ ಜನರೇಟರ್‌ನಿಂದ ಶಬ್ದ ಮಾಲಿನ್ಯ ಉಂಟಾಗಿ ಸುತ್ತಮುತ್ತಲಿನ ವಾಸಿಗಳಿಗೆ \ ರೋಗಿಗಳಿಗೆ ಮಾರಕವಾಗಿದೆಯೆಂದು ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು, ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್ ಹಾಗೂ ಪರಿಸರ ಇಲಾಖೆಗೆ ದೂರನ್ನು ನೀಡಿದೆ. ಈ ದೂರಿನ ಮೇರೆಗೆ ತಾಲ್ಲೂಕ್ ಕಛೇರಿ ಹಾಗೂ ತಾಲ್ಲೂಕ್ ಪಂಚಾಯತ್ ಸಭೆ ಕರೆದು ಟವರ್‌ಗೆ ನೀಡಿದ ನಿರಾಪೇಕ್ಷಣಾ ಪತ್ರವನ್ನು ರದ್ದುಗೊಳಿಸುವಂತೆ ಗ್ರಾಮ ಪಂಚಾಯತ್‌ಗೆ ಸೂಚಿಸಿದ್ದಾರೆ. ಜನ ವಸತಿ ಪ್ರದೇಶದಲ್ಲಿ ಟವರನ್ನು ಅಳವಡಿಸಿದ್ದರಿಂದ ಸುತ್ತಮುತ್ತಲಿನ ಕೊಳವೆಬಾವಿಗಳಲ್ಲಿ ನೀರು ಕುಡಿಯಲು ಯೋಗ್ಯವಾಗಿಲ್ಲ ಮತ್ತು ಜನ ವಸತಿ ಪ್ರದೇಶದಲ್ಲಿ ಟವರನ್ನು ಅಳವಡಿಸಬಾರದೆಂಬ ನಿಯಮ \ ಕಾನೂನು ಇದ್ದರೂ ಜಾಗದ ಮಾಲೀಕರು ಹಾಗೂ ಟೆಲಿಫೋನ್ ಕಂಪನಿಯವರು

ಕಾನೂನು ಉಲ್ಲಂಘಿಸಿ, ಟವರ್ ಅಳವಡಿಸಿ, ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಿದ್ದು, ಅವರ ವಿರುದ್ಧ ಯಾವುದೇ ಅಧಿಕಾರಿಯು ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

1) ಟೆಲಿಕಮ್ಯೂನಿಕೇಷನ್ ಗೋಪುರಗಳು ಮತ್ತು ಅದರ ಸಲಕರಣೆಗಳನ್ನು, ವಸತಿ \ ವಾಣಿಜ್ಯ ಕಟ್ಟಡಗಳು ಮತ್ತು ನೆಲಮಹಡಿಯಲ್ಲಿ ನಿರ್ಮಿಸುವ ಬಗ್ಗೆ ಕರ್ನಾಟಕ ಸರ್ಕಾರ ಸುತ್ತೋಲೆ ಸಂ:ನಅಇ.55.ಜಿಇಎಲ್.2005 ದಿನಾಂಕ:02/03/05ರಲ್ಲಿ ಅನೇಕ ಸೂಚನೆಗಳನ್ನು ನೀಡಿದೆ;

2) ಮೈಸೂರು ತಾಲ್ಲೂಕ್ ಸೋಮೇಶ್ವರಪುರ ಗ್ರಾಮದ ಶ್ರೀ.ಗುರುಮಲ್ಲಪ್ಪ ರವರ ನಿವೇಶನದಲ್ಲಿ ವೋಡಾಫೋನ್ ಕಂಪನಿಯ ಟವರನ್ನು ಅಳವಡಿಸಲು ಅಭ್ಯಂತರವಿಲ್ಲವೆಂದು ದಿ:24/12/09ರಂದು ಗ್ರಾಮಸ್ಥರು, ಗ್ರಾಮ ಪಂಚಾಯತ್ ಸದಸ್ಯರು, ಉಪಾಧ್ಯಕ್ಷರು ಮತ್ತು ಅಧ್ಯಕ್ಷರು ಒಪ್ಪಿ ಸರ್ಕಾರಕ್ಕೆ ಕೊಟ್ಟಿರುವ ಮುಚ್ಚಳಿಕೆ ಪತ್ರದ ಆಧಾರದ ಮೇಲೆ, ಶ್ರೀ.ಗುರುಮಲ್ಲಪ್ಪ ರವರಿಗೆ ನಿರಾಕ್ಷೇಪಣಾ ಪತ್ರ ನೀಡಿದ್ದು, ಅದರಂತೆ ಅವರ ನಿವೇಶನದಲ್ಲಿ ಮೊಬೈಲ್ ಟವರ್ ನಿರ್ಮಿಸಲಾಗಿದೆ. ಸದರಿ ಮೊಬೈಲ್ ಟವರ್‌ನ ಸಂಬಂಧ ಯಾವುದೇ ಕಂದಾಯವಿಲ್ಲದೆ ಕಾಲಾವಕಾಶವನ್ನು ಸ್ಥಳೀಯ ಸಂಸ್ಥೆಯಾದ ಗ್ರಾಮ ಪಂಚಾಯತ್‌ನಿಂದ ನೀಡಿಲ್ಲ;

3) ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಸಂ:ಪೌ.ನಿ\ಇತರೆ\ಸಿಆರ್\629\12–13 ದಿ:23/01/13ರಲ್ಲಿ ಜನಸಾಮಾನ್ಯರ ಆರೋಗ್ಯದ ಮೇಲೆ ಪ್ರಾಣಿ–ಪಕ್ಷಿಗಳು ಹಾಗೂ ಸಸ್ಯ ಸಂಕುಲಗಳ ಮೇಲೆ ದುಷ್ಪರಿಣಾಮ ಉಂಟಾಗುವುದರಿಂದ, ಅಂಥಹ ದುಷ್ಪರಿಣಾಮಗಳನ್ನು ತಪ್ಪಿಸಲು ಮೊಬೈಲ್ ಟವರ್‌ಗಳ ಅಳವಡಿಕೆಗೆ ಕೇಂದ್ರೀಯ ದೂರ ಸಂಪರ್ಕ ಇಲಾಖೆಯು ಶಿಫಾರಸ್ಸು ಮಾಡಿರುವ ಕೆಲವು ಪ್ರಮುಖ ಮಾರ್ಗಸೂಚಿಗಳನ್ನು ತಿಳಿಸಿ, ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ಕೋರಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಈ ಬಗ್ಗೆ ಜ್ಞಾಪನ ಪತ್ರ ದಿ:22/02/13ರಲ್ಲಿ ಮಾಹಿತಿಯಿದೆ;

4) ಮೈಸೂರು ತಾಲ್ಲೂಕ್ ಸೋಮೇಶ್ವರ ಪುರ ಗ್ರಾಮದ ನಿವಾಸಿಯಾದ ಶ್ರೀ.ಅಂಬರೀಶ ಬಿನ್ ಮಾದಪ್ಪ ರವರು (ದೂರುದಾರರು) ಮಾಹಿತಿ ಹಕ್ಕು ಕಾಯಿದೆ ಅಡಿ ಸೋಮೇಶ್ವರ ಪುರ ಗ್ರಾಮದಲ್ಲಿ ಹಾಕಿರುವ ಮೊಬೈಲ್ ಟವರ್ ಬಗ್ಗೆ ಮಾಹಿತಿ ಕೇಳಿದ್ದು, ಇದರ ಸಂಬಂಧ ದಿ:06/08/13ರಂದು ಶ್ರೀ.ಗುರುಮಲ್ಲಪ್ಪ ಬಿನ್ ಮಲ್ಲಪ್ಪ ಎಂಬುವವರಿಗೆ ಎನ್‌ಒಸಿ ಮಾತ್ರ ನೀಡಲಾಗಿದೆಯೆಂಬ ವಿವರಣೆ ಪತ್ರ ನೀಡಲಾಗಿದೆ;

5) ಜಿಲ್ಲಾ ಬಸವ ಸೇವಾ ಸಮಿತಿ (ರಿ), ಸೋಮೇಶ್ವರ ಪುರ ಎಂಬ ಲೆಟರ್ ಹೆಡ್‌ನಲ್ಲಿ ಗ್ರಾಮಸ್ಥರು, ಸೋಮೇಶ್ವರ ಪುರ, ಮೈಸೂರು ತಾಲ್ಲೂಕ್ ಎಂಬುವವರು ಶ್ರೀ.ಅಂಬರೀಶ ಎಂಬುವವರು ಸೇರಿ ದಿ:13/09/13ರಂದು ಮೊಬೈಲ್ ಟವರ್‌ಗೆ ನೀಡಿರುವ ಎನ್‌ಒಸಿ ರದ್ದುಗೊಳಿಸಲು ಅಧ್ಯಕ್ಷರು, ಗ್ರಾಮ ಪಂಚಾಯತ್, ಸೋಮೇಶ್ವರ ಪುರ ರವರಿಗೆ ನೀಡಿರುವುದು ಬೋಗಸ್‌ನಿಂದ ಕೂಡಿದೆ. ಅಧ್ಯಕ್ಷರು, ಜಿಲ್ಲಾ ಬಸವ ಸೇವಾ ಸಮಿತಿ (ರಿ), ಸೋಮೇಶ್ವರ ಪುರ ರವರು ಮೊಬೈಲ್ ಟವರ್ ತೆರವುಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಯವರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು, ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಮೈಸೂರು ಹಾಗೂ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು ರವರಿಗೆ ಕಳುಹಿಸಿದ ಮನವಿ ಯಲ್ಲಿ ಅವರವರ ಅಧೀನ ಅಧಿಕಾರಿಗಳಿಗೆ ಮತ್ತು ಅಂತಿಮವಾಗಿ ಸೋಮೇಶ್ವರ ಗ್ರಾಮ ಪಂಚಾಯತ್‌ಗೆ ಯಾವುದೇ ನಿಖರವಾದ ಆದೇಶವನ್ನು ನೀಡದೇ ಕೇವಲ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ;

6) ಮೈಸೂರು ತಹಶೀಲ್ದಾರರು ಮತ್ತು ಪರಿಸರಾಧಿಕಾರಿಗಳು, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಮೈಸೂರು ರವರಿಗೆ ಪತ್ರ ಬರೆದು ಮೊಬೈಲ್ ಟವರ್‌ನಿಂದ ಆಗುವ ತೊಂದರೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿದ್ದು, ಅದಕ್ಕನುಸಾರವಾಗಿ ಉಪ ಪರಿಸರಾಧಿಕಾರಿಗಳು ದಿ:18/12/13ರಂದು ಸ್ಥಳ ಪರಿಶೀಲಿಸಿ, ಡಿಜಿ ಸೆಟ್‌ನಿಂದ ಬರುವ ಶಬ್ದದ ಮಾಪನ ಮಾಡಿ, ಯಾವುದೇ ವ್ಯಕ್ತಿ, ವಸ್ತು, ಆಸ್ತಿ-ಪಾಸ್ತಿ ಮತ್ತು ಪ್ರಾಣಿ ಪಕ್ಷಿಗಳಿಗೆ ಹಾನಿಯಾಗಿರುವುದಿಲ್ಲವೆಂದು ದೃಢೀಕರಿಸಿದ್ದಾರೆ. ನಿರ್ದೇಶಕರು, ಬೆಂಗಳೂರು ಟೆಲಿಕಾಂ ಇಲಾಖೆ ರವರು ದಿ:27/01/14ರ ಪತ್ರದಲ್ಲಿ "The measured values are found to be within permissible limts" ಎಂದು ಹೇಳಿರುತ್ತಾರೆ. ಅದರಂತೆ, ದೂರುದಾರರಿಗೆ ದಿ:27/05/14ರಂದು ಹಿಂಬರಹ ನೀಡಿ, ಟವರ್ ತೆರವುಗೊಳಿಸಲು ಈ ಕಛೇರಿ ವ್ಯಾಪ್ತಿಗೆ ಅವಕಾಶವಿಲ್ಲವೆಂದು ಹೇಳಿದೆ. ದಿ:09/09/13ರಂದು ನಡೆದ ಪಂಚಾಯತ್ ಗ್ರಾಮ ಸಭೆಯಲ್ಲಿ ವಿಷಯ ಪ್ರಸ್ತಾಪವಾಗಿದ್ದು, ಸದಸ್ಯರು ಮತ್ತು ಗ್ರಾಮಸ್ಥರು ಸರ್ವಾನುಮತದಿಂದ ಒಪ್ಪಿ ಮೊಬೈಲ್ ಟವರ್‌ಗೆ ನೀಡಿರವು ಎನ್‌ಒಸಿ ಅನ್ನು ರದ್ದುಗೊಳಿಸಲು ತೀರ್ಮಾನಿಸಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಯವರಿಗೆ ಪತ್ರ ವ್ಯವಹರಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ತಿಳಿಸಿದಂತೆ ತಹಶೀಲ್ದಾರ್, ಮೈಸೂರು ರವರಿಗೆ ಪತ್ರ ವಿಳಾಸಿಸಿ ಪ್ರತಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ರವರಿಗೆ ನೀಡಿ ಕ್ರಮ ಕೈಗೊಳ್ಳಲು ಕೋರಿದೆ. ಅದಕ್ಕನುಗುಸಾರವಾಗಿ, ಕಾರ್ಯನಿರ್ವಾಹಕ ಅಧಿಕಾರಿ ರವರು ಮೊಬೈಲ್ ಟವರ್ ತೆರವುಗೊಳಿಸಲು ಅನುಮತಿ ನೀಡಿದ್ದಾರೆ. ಈ ಸಂಬಂಧ ನಿವೇಶನ ಮಾಲೀಕರಾದ ಶ್ರೀ.ಗುರುಮಲ್ಲಪ್ಪ ರವರಿಗೆ ತಿಳುವಳಿಕೆ ಪತ್ರ ನೀಡಿ, ದಿ:07/03/14ರಂದು ಬಂದೋಬಸ್ತ್‌ಗಾಗಿ ಪೊಲೀಸ್ ವ್ಯವಸ್ಥೆ ನೀಡಬೇಕೆಂದು ದಿ:05/03/14ರಂದು ಆರಕ್ಷಕ ಉಪ ನಿರೀಕ್ಷಕರು, ದಕ್ಷಿಣ ವಲಯ ಗ್ರಾಮಾಂತರ ಪೊಲೀಸ್ ಠಾಣೆ, ಮೈಸೂರು ರವರನ್ನು ಕೋರಿಕೊಳ್ಳಲಾಗಿತ್ತು. ದಿ:07/03/14ರಂದು ಟವರ್ ಅಳವಡಿಸಿದ್ದ ಸ್ಥಳಕ್ಕೆ ಹೋಗಲಾಗಿ, ಶ್ರೀ.ಸುಹಾಸ್.ಎಂ, ತಂತ್ರಜ್ಞರು, ಇಂಡಸ್ ಟವರ್ ಲಿ., ಇವರು ಟವರಿನ ಅಧಿಕೃತ ಅಧಿಕಾರಿಯಾದ ಶ್ರೀ.ವಿನಯ್ ರವರ ಕೋರಿಕೆಯಂತೆ ತೆರವುಗೊಳಿಸಲು 15 ದಿನಗಳ ಕಾಲಾವಕಾಶವನ್ನು ನೀಡಿದ್ದು, ಅವರಿಗೆ ಕಾಲಾವಕಾಶ ನೀಡಿದೆ. ನಂತರ ಅವರು, ದಿ:18/03/14ರಂದು ಶ್ರೀ.ಸಾಯಿಕುಮಾರ್, ವಕೀಲರಿಂದ ನೋಟೀಸ್ ಜಾರಿ ಮಾಡಿದ್ದಾರೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಮೊಬೈಲ್ ಟವರ್ ಸ್ಥಾಪನೆ ಮತ್ತು ಕಾರ್ಯಾಚರಣೆಗೆ ಸಂಬಂಧಿಸಿಂತೆ, ಆಯುಕ್ತರು, ಪೌರಾಯುಕ್ತ ನಿರ್ದೇಶನಾಲಯ, ಬೆಂಗಳೂರು ರವರು ದಿ:23/01/13ರಂದು ಜಾರಿಗೊಳಿಸಿದ ಮಾರ್ಗಸೂಚಿಗಳನ್ನು ಸ್ಥಳೀಯ ಸಂಸ್ಥೆಯ ಆಡಳಿತ ವ್ಯಾಪ್ತಿಯಲ್ಲಿ ಜಾರಿಗೊಳಿಸಬೇಕಿದ್ದು, ಇದಕ್ಕೆ ಸಂಬಂಧಿಸಿದಂತೆ, ಸೋಮೇಶ್ವರ ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಗಳು ಕ್ರಮ ಜರುಗಿಸಬೇಕಾಗಿದೆ. ದೂರುದಾರರು ಮಂಡಳಿಗೆ ಸಲ್ಲಿಸಿರುವ ದೂರಿನನ್ವಯ, ಡೀಸೆಲ್ ಜನರೇಟರ್‌ನಿಂದ ಶಬ್ದದ ಮಟ್ಟವನ್ನು ಮಾಪನ ಮಾಡಿ, ಶಬ್ದದ ಮಟ್ಟ ಮಂಡಳಿಯು ನಿಯಮಾನುಸಾರ ನಿಗದಿಪಡಿಸಿರುವ ಮಟ್ಟಕ್ಕಿಂತ ಕಡಿಮೆ ಇರುವುದನ್ನು ಪರಿಗಣಿಸಿ, ದೂರಿಗೆ ಸಂಬಂಧಿಸಿದಂತೆ, ದೂರುದಾರರಿಗೆ ಹಾಗೂ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರಿಗೆ ಹಿಂಬರಹ ನೀಡಿದ್ದು, ಪತ್ರದ ಪ್ರತಿಯನ್ನು ಸೋಮೇಶ್ವರ ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಗಳಿಗೆ ಜಾರಿ ಮಾಡಿದೆ. ಅದರಂತೆ ಮಂಡಳಿಯಿಂದ ಶಬ್ದ ಮಾಲಿನ್ಯ (ತಡೆ ಮತ್ತು ನಿರ್ವಹಣೆ) ನಿಯಮ, 2000ದನ್ವಯ ದೂರಿಗೆ ಸಂಬಂಧಿಸಿದಂತೆ ಕ್ರಮ ಕೈಗೊಂಡಿದೆಯೆಂದು ಹೇಳಿದ್ದಾರೆ.

5. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಸದರಿಯವರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನೇ ಪುನರುಚ್ಚರಿಸಿದ್ದಾರೆ.

6. ದೂರಿನ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ರವರಿಗೆ ಕೇಳಲಾಗಿ, ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ತಮ್ಮ ವರದಿಯಲ್ಲಿ –

ದೂರಿಗೆ ಸಂಬಂಧಪಟ್ಟಂತೆ ನಕಾರಾತ್ಮಕ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಕ್ಕೆ ಆರಕ್ಷಕ ಅಧೀಕ್ಷಕರು ಒಪ್ಪುತ್ತಾ ತಮ್ಮ ಷರಾದಲ್ಲಿ, 1ನೇ ಎದುರುದಾರರು ತಮ್ಮ ಮೇಲಾಧಿಕಾರಿಯಾದ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮೊಬೈಲ್ ಟವರನ್ನು ಸ್ಥಳಾಂತರಗೊಳಿಸಲು ಸೂಚಿಸಿದ್ದರೂ ಕ್ರಮ ವಹಿಸದೇ ಇರುವುದು ವಿಚಾರಣೆಯಿಂದ ಮತ್ತು ದಾಖಲಾತಿಗಳಿಂದ ತಿಳಿದು ಬಂದಿದೆ. ಮೇಲಾಧಿಕಾರಿಗಳ ಸ್ಪಷ್ಟ ಆದೇಶವಿದ್ದರೂ ಮತ್ತು ಟವರ್‌ಗೆ ಎನ್‌ಒಸಿ ರದ್ದಾಗಿದ್ದರೂ ಮೊಬೈಲ್ ಟವರನ್ನು ತೆರವುಗೊಳಿಸದೇ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆಯೆಂದು ಹೇಳಿದ್ದಾರೆ.

7. ತನಿಖಾಧಿಕಾರಿಗಳ ವರದಿಗೆ ಎದುರುದಾರರಿಂದ ಉತ್ತರವನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಉತ್ತರದಲ್ಲಿ –

ಶ್ರೀ.ಗುರುಮಲ್ಲಪ್ಪ ರವರ ನಿವೇಶನದಲ್ಲಿ ವೊಡಾಫೋನ್ ಟವರ್ ಹಾಕಲು ದಿ:24/12/09ರಲ್ಲಿ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಗ್ರಾಮಸ್ಥರು ಸಹಿ ಮಾಡಿ ಅನುಮತಿಸಿದ್ದು, ಆ ಸಮಯದಲ್ಲಿ ತಾವು ಸದರಿ ಪಂಚಾಯತ್‌ನಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರಲಿಲ್ಲ. ದಿ:19/09/13ರಂದು ಗ್ರಾಮ ಪಂಚಾಯತ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮೊಬೈಲ್ ಟವರ್‌ಗೆ ನೀಡಿರುವ ಎನ್‌ಒಸಿ ಅನ್ನು ರದ್ದುಗೊಳಿಸಲು ತೀರ್ಮಾನಿಸಿ, ದಿನಾಂಕ:25/09/13ರಂದು ನಡವಳಿ ಪ್ರತಿಯನ್ನು ಸಲ್ಲಿಸಿದೆ. ಸದರಿ ಮೊಬೈಲ್ ಟವರನ್ನು ತೆರವುಗೊಳಿಸಲು ದಿನಾಂಕ:20/02/14ರಂದು ಟವರ್ ಮಾಲೀಕರಿಗೆ ನೋಟೀಸನ್ನು ನೀಡಿದೆ. ದಿನಾಂಕ:07/03/14ರಂದು ಜನಪ್ರತಿನಿಧಿಗಳ, ಗ್ರಾಮಸ್ಥರ ಸಮ್ಮುಖದಲ್ಲಿ ಖುದ್ದು ಸ್ಥಳಕ್ಕೆ ಹಾಜರಾಗಿ ಕ್ರಮವಹಿಸಲು ಮುಂದಾಗಿದ್ದು, ಟವರ್ ಮಾಲೀಕರು 15 ದಿನಗಳ ಕಾಲಾವಕಾಶ ಕೋರಿದಾಗ, ಮಹಜರ್ ಮಾಡಿದೆ. ದಿನಾಂಕ:18/03/14ರಂದು ಮೆ॥ಇಂಡಸ್ ಟವರ್ಸ್ ರವರು ತಮ್ಮ ವಕೀಲರ ಮೂಲಕ ಕಾನೂನುಬದ್ಧ ನೋಟೀಸನ್ನು ನೀಡಿ, ಮಿನಿಸ್ಟರಿ ಆಫ್ ಟೆಲಿಕಮ್ಯೂನಿಕೇಷನ್ ಮತ್ತು ಐಟಿ ಗವರ್ನಮೆಂಟ್ ಆಫ್ ಇಂಡಿಯಾ ರವರಿಂದ ಇಂಡಿಯಾ ಟೆಲಿಗ್ರಾಫ್ ಕಾಯಿದೆ ಕಲಂ 4ರ ಅಡಿಯಲ್ಲಿ ಅನುಮತಿ ಪಡೆದು ಕಲಂ 10ರಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿದ್ದು, ತಾವು ಪ್ರಾಮಾಣಿಕವಾಗಿ ಕ್ರಮ ವಹಿಸಿ, ಎಲ್ಲಾ ಕ್ರಮಗಳನ್ನು ಕೈಗೊಂಡು, ಮೊಬೈಲ್ ಟವರನ್ನು ತೆರವುಗೊಳಿಸುವಲ್ಲಿ ಯಾವುದೇ ಕರ್ತವ್ಯ ಲೋಪ ಎಸಗಿಲ್ಲವೆಂದು ಹೇಳಿದ್ದಾರೆ.

8. ಎರಡನೇ (2ನೇ) ಎದುರುದಾರರು ತಮ್ಮ ಉತ್ತರದಲ್ಲಿ, ತನಿಖಾಧಿಕಾರಿಗಳ ವರದಿಯಲ್ಲಿ ತಮ್ಮ ಮೇಲೆ ಆಪಾದನೆಗಳು ಸಾಬೀತಾಗಿಲ್ಲವೆಂದು ಹೇಳಿದ್ದಾರೆ.

9. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಮೈಸೂರು ತಾಲ್ಲೂಕ್ ಸೋಮೇಶ್ವರ ಪುರ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದ ಸೋಮೇಶ್ವರ ಪುರ ಗ್ರಾಮದ ಶ್ರೀ.ಗುರುಮಲ್ಲಪ್ಪ ರವರ ನಿವೇಶನದಲ್ಲಿ ವೊಡಾಫೋನ್ ಕಂಪನಿಯ ಟವರ್ ಅಳವಡಿಸಲು ತಮ್ಮಿಂದ ಯಾವುದೇ ಅಭ್ಯಂತರ ಇಲ್ಲವೆಂದು ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಹಾಗೂ ಗ್ರಾಮಸ್ಥರು ದಿ:24/12/09ರಂದು ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ನೀಡಿದ್ದಾರೆ. ಸದರಿ ಟವರ್‌ಗೆ ಅಳವಡಿಸಿದ ಜನರೇಟರ್‌ನಿಂದ ಶಬ್ದ ಮಾಲಿನ್ಯ ಉಂಟಾಗಿ ಸುತ್ತ ಮುತ್ತಲಿನ ವಾಸಿಗಳಿಗೆ ತೊಂದರೆಯಾಗುತ್ತಿದೆ ಮತ್ತು ಟವರ್‌ನ ಸುತ್ತಮುತ್ತಲು ಇರುವ ಕೊಳವೆ ಬಾವಿ ನೀರು ಮಲಿನಗೊಂಡಿದೆಯೆಂದು ದೂರಿನಲ್ಲಿ ಆಪಾದಿಸಿದೆ;

2) ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ತಮ್ಮ ಪತ್ರ ಸಂ:ಪೌ.ನಿ\ಇತರೆ\ಸಿಆರ್\629\12-13 ದಿ:23/01/13ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ನೀಡಿದ್ದಾರೆ. ಸದರಿ ಮಾರ್ಗಸೂಚಿಯಲ್ಲಿ ಸರ್ಕಾರದ ಪತ್ರ

ಸಂ:ನಅಇ.441.ಜಿಇಎಲ್.2012 ದಿನಾಂಕ:27/11/12ನ್ನು ಉಲ್ಲೇಖಿಸಿದೆ. ಸದರಿ ಪತ್ರದಲ್ಲಿ ಕೆಳಕಂಡ ಮಾರ್ಗಸೂಚಿಗಳನ್ನು ಹೇಳಿದೆ –

1) ಮೊಬೈಲ್ ಟವರ್‌ಗಳನ್ನು ಶಾಲಾ–ಕಾಲೇಜು, ಆಸ್ಪತ್ರೆ ಆವರಣದಲ್ಲಿ ಸ್ಥಾಪಿಸಬಾರದು;
2) ಕಟ್ಟಡದ ಛಾವಣಿಯ ಮೇಲೆ ಮೊಬೈಲ್ ಟವರ್‌ಗಳ ಅಳವಡಿಕೆಯನ್ನು ನಿಯಂತ್ರಿಸಬೇಕು;
3) ಮೊಬೈಲ್ ಟವರ್‌ಗಳ ಸ್ಥಾಪನೆಗೆ ಸ್ಥಳೀಯ ಸಂಸ್ಥೆಗಳು / ನಗರ ಯೋಜನೆ ಇಲಾಖೆ/ ಗ್ರಾಮ ಪಂಚಾಯತ್/ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕು;
4) ಪ್ರಸ್ತುತ ಚಾಲ್ತಿಯಲ್ಲಿರುವ ರೇಡಿಯೇಷನ್ ಮಾಪನಗಳ ಅನುಗುಣವಾಗಿ ಮೊಬೈಲ್ ಟವರ್‌ಗಳು ಸಮೀಪದ ಕಟ್ಟಡಗಳಿಂದ ದೂರದಲ್ಲಿ ಮತ್ತು ಭೂ ಮತ್ತು ಸಮೀಪದ ಕಟ್ಟಡದ ಛಾವಣಿಗಿಂತ ಸಾಕಷ್ಟು ಎತ್ತರದಲ್ಲಿರಬೇಕು;
5) ಮೊಬೈಲ್ ಟವರ್‌ಗಳ ಸ್ಥಾಪನೆಗೆ ಜಾಗದ / ಕಟ್ಟಡದ ಮಾಲೀಕರಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು.

3) ಸದರಿ ದೂರಿಗೆ ಸಂಬಂಧಪಟ್ಟ ಮೊಬೈಲ್ ಟವರನ್ನು ಶ್ರೀ.ಗುರುಮಲ್ಲಪ್ಪ ಬಿನ್ ಮಲ್ಲಪ್ಪ ರವರ ನಿವೇಶನದಲ್ಲಿ ಸ್ಥಾಪಿಸಿದೆ. ಸದರಿ ಮೊಬೈಲ್ ಟವರನ್ನು ಸ್ಥಾಪಿಸಲು ಸೋಮೇಶ್ವರ ಗ್ರಾಮ ಪಂಚಾಯತಿಯು ನಿರಾಪೇಕ್ಷಣಾ ಪತ್ರವನ್ನು ಶ್ರೀ.ಗುರುಮಲ್ಲಪ್ಪ ರವರಿಗೆ ಮಾತ್ರ ನೀಡಿರುವುದು ಕಂಡು ಬಂದಿದ್ದು, ಗ್ರಾಮ ಪಂಚಾಯತ್‌ನಿಂದ ಕ್ರಮ ಬದ್ಧವಾದ ಪೂರ್ವಾನುಮತಿಯನ್ನು ಮೆ॥ಇಂಡಸ್ ಟವರ್ಸ್ ಲಿ., ಬನ್ನೇರುಘಟ್ಟ ರಸ್ತೆ, ಬೆಂಗಳೂರು ರವರಿಗೆ ಕೊಟ್ಟಿಲ್ಲವೆಂದು ಸೋಮೇಶ್ವರ ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಗಳು ದೂರುದಾರರಿಗೆ ನೀಡಿದ ವಿವರಣೆ \ ಹಿಂಬರಹದಲ್ಲಿ ಕಂಡು ಬಂದಿದೆ. ಸದರಿ ದಾಖಲೆಯು ಮಹಜರ್ ರೀತಿಯದ್ದಾಗಿದ್ದು, ಮೊಬೈಲ್ ಟವರ್ ಸ್ಥಾಪನೆಗೆ ಸ್ಥಳ / ನಿವೇಶನದ ಮಾಲೀಕ ಶ್ರೀ.ಗುರುಮಲ್ಲಪ್ಪ ಬಿನ್ ಮಲ್ಲಪ್ಪ ರವರಾಗಲೀ ಅಥವಾ ಮೆ॥ಇಂಡಸ್ ಟವರ್ಸ್ ಲಿ., ಬನ್ನೇರುಘಟ್ಟ ರಸ್ತೆ, ಬೆಂಗಳೂರು ಸಂಸ್ಥೆಯವರಾಗಲೀ ಪ್ರತ್ಯೇಕವಾಗಿ ಅನುಮತಿಯನ್ನು ಪಡೆಯದಿರುವುದು ಕಂಡು ಬಂದಿದೆ;

4) ದೂರಿಗೆ ಸಂಬಂಧಪಟ್ಟ ಮೊಬೈಲ್ ಟವರ್‌ಗೆ ಸಂಬಂಧಪಟ್ಟಂತೆ ಸ್ಥಳ ಪರಿಶೀಲನೆ ಮಾಡಿ, ವರದಿ ನೀಡುವಂತೆ 1ನೇ ಎದುರುದಾರರಿಗೆ ಮೈಸೂರು ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ನೋಟೀಸ್ ನೀಡಿದ್ದು, ದಿ:19/09/13ರಂದು ನಡೆದ ಗ್ರಾಮಸಭೆಯಲ್ಲಿ ವಿಷಯ ಪ್ರಸ್ತಾಪಿಸಿ, ಸದರಿ ವಿಷಯವಾಗಿ ಸದಸ್ಯರು ಹಾಗೂ ಗ್ರಾಮಸ್ಥರು ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಮೊಬೈಲ್ ಟವರ್‌ಗೆ ನೀಡಿರುವ ಎನ್‌ಒಸಿ ಯನ್ನು ರದ್ದುಗೊಳಿಸಲು ಪಂಚಾಯತ್ ನಡಾವಳಿಯಲ್ಲಿ ತೀರ್ಮಾನಿಸಿದೆ. ಅದರಂತೆ, 1ನೇ ಎದುರುದಾರರು ಕ್ರಮ ವಹಿಸಿ ಜಾಗದ ಮಾಲೀಕರಿಗೆ ಮುಂಗಡ ನೋಟೀಸ್ ಜಾರಿ ಮಾಡಿ, ಮೊಬೈಲ್ ಟವರನ್ನು ತೆರವುಗೊಳಿಸಲು ಕ್ರಮ ಕೈಗೊಂಡಿದ್ದಾರೆ;

5) ಮೊಬೈಲ್ ಟವರ್‌ಗೆ ಅಳವಡಿಸಿದ 15ಕೆವಿಎ ಜನರೇಟರ್ ಸೆಟ್‌ಗೆ ವಾಯು ಮಾಲಿನ್ಯ (ತಡೆ ಹಾಗೂ ನಿಯಂತ್ರಣ) ಕಾಯಿದೆ ಮತ್ತು ನಿಯಮಗಳ ಅಡಿ ನೀಡಲ್ಪಟ್ಟ ಪರವಾನಗಿ ದಿ:31/12/14ಕ್ಕೆ ಕೊನೆಗೊಂಡಿದೆ. ಸದರಿ ಪರವಾನಗಿ ನವೀಕರಿಸಿದ ಬಗ್ಗೆ ದಾಖಲೆಗಳಿಲ್ಲ.

10. ಆದ್ದರಿಂದ, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂ:ಪೌ.ನಿ\ಇತರೆ\ಸಿಆರ್\629\12-13 ದಿ:23/01/13ರಲ್ಲಿನ ಮಾರ್ಗಸೂಚಿಗಳನ್ವಯ ಸ್ಥಳೀಯ ಸಂಸ್ಥೆಯಾದ ಗ್ರಾಮ ಪಂಚಾಯತ್‌ನ ಪೂರ್ವಾನುಮತಿಯನ್ನು ಪಡೆಯದೇ, ಸದರಿ ಸಂಸ್ಥೆಯು ಮೊಬೈಲ್ ಟವರನ್ನು ಸ್ಥಾಪಿಸಿರುವುದರಿಂದ ಮತ್ತು ಸದರಿ ಮೊಬೈಲ್ ಟವರ್‌ಗೆ ಅಳವಡಿಸಿದ 15ಕೆವಿಎ ಜನರೇಟರ್ ಸೆಟ್‌ಗೆ ಪರಿಸರ ಇಲಾಖೆ ಕೊಟ್ಟಿರುವ ಪರವಾನಗಿ ನವೀಕರಿಸದೇ ಇರುವುದರಿಂದ, ಸದರಿ ಮೊಬೈಲ್ ಟವರನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 17/12

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.